## ಪಶ್ಚಿಮ ವಲಯ ವ್ಯಾಪ್ತಿಯ, ಮಲ್ಲೇಶ್ವರಂ ಉಪವಿಭಾಗದ ಕಾಡುಮಲ್ಲೇಶ್ವರ ವಾರ್ಡ್–65ರಲ್ಲಿ ಆನ್‌ಲೈನ್ (Zoom App) ಮೂಲಕ ದಿನಾಂಕ: 17–07–2021 ರಂದು, ನಡೆದ ವಾರ್ಡ್ ಸಮಿತಿ ಸಭೆಯ

### ಸಭಾ ನಡವಳಿಗಳು.

**ವಾರ್ಡ್ ಸಂಖ್ಯೆ–65 ಕಾಡುಮಲ್ಲೇಶ್ವರ** **ಸಮಯ ಬೆಳಿಗ್ಗೆ 11:00 ಘಂಟೆಗೆ**

ದಿನಾಂಕ: 17–07–2021 ರಂದು ವಾರ್ಡ್ ಸಂಖ್ಯೆ:65ರ ಜೂನ್ ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಆನ್‌ಲೈನ್ (Zoom App) ಮೂಲಕ ಭಾಗವಹಿಸಿದ್ದರು. ವಾರ್ಡ್ ಸಂಖ್ಯೆ: 65ರ ಸಹಾಯಕ ಅಭಿಯಂತರರು ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದು ಎಲ್ಲರಿಗೂ ಸ್ವಾಗತವನ್ನು ಕೋರಿದರು ಹಾಗೂ ಸದಸ್ಯರುಗಳೆಲ್ಲರ ಕಿರು ವಿವರ ತಿಳಿಸಿ, ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಕೊಂಡು ಸಭೆ ನಡೆಸಲು ಕೋರಿದರು.

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಗಾಂಧಿಗ್ರಾಮ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾದ ಡಾ//ಅನಿಲ್ ಸಭೆಯಲ್ಲಿ ಹಾಜರಿದ್ದು, ಆರೋಗ್ಯ ಕೇಂದ್ರದಲ್ಲಿ 45 ವರ್ಷ ಮೇಲ್ಪಟ್ಟವರ ಕೋವಿಡ್ ಶಿಲ್ಡ್ ಪ್ರತಿದಿನ ನೀಡುತ್ತಿದ್ದು, ಎನ್.ಜಿ.ಓಸ್‌ಗಳು ಸಮರ್ಪಕವಾಗಿ ಸಾರ್ವಜನಿಕರಿಗೆ ಮಾರ್ಗದರ್ಶನ ನೀಡುತ್ತಿರುತ್ತಾರೆಂದು, ಪ್ರತಿದಿನದ ವ್ಯಾಕ್ಸಿನ್ ಬಗ್ಗೆ ಗ್ರೂಪಿನಲ್ಲಿ ಮಾಹಿತಿ ನೀಡುವುದಾಗಿ ಸಭೆಗೆ ತಿಳಿಸಿರುತ್ತಾರೆ. ಹಾಗೂ ಡೆಲ್ಟಾ ಕೇಸಸ್‌ನ ಬಗ್ಗೆ ಪರೀಕ್ಷಿಸಿ ಹಾಗೂ ಮೂರನೇ ಅಲೆಯ ಬಗ್ಗೆ ಆರೋಗ್ಯ ಕೇಂದ್ರದಲ್ಲಿ ಸಿದ್ದತೆಗಳನ್ನು ಮಾಡಿಕೊಳ್ಳುವುದಾಗಿ ಸಭೆಗೆ ತಿಳಿಸಿರುತ್ತಾರೆ.
- ಆರೋಗ್ಯ ಇಲಾಖೆಯ ಕಿರಿಯ ಆರೋಗ್ಯ ಪರಿವೀಕ್ಷರು ಸಭೆಯಲ್ಲಿ ಹಾಜರಿದ್ದು, ಸಾರ್ವಜನಿಕರು ಕೇಳಿದ್ದ 11ನೇ ಮುಖ್ಯರಸ್ತೆಯಲ್ಲಿ ಉಗುಳುವುದು ಮತ್ತು ಮೂತ್ರವಿಸರ್ಜಣೆ ಬಗ್ಗೆ ಶೌಚಾಲಯ ಇರುವ ಬಗ್ಗೆ ಮಾರ್ಗಸೂಚಿ ಫಲಕಗಳನ್ನು ಅಳವಡಿಸಬೇಕೆಂದು ಕೇಳಿರುತ್ತಾರೆ.
- 8ನೇ ಅಡ್ಡರಸ್ತೆ ಮತ್ತು ಸಂಪಿಗೆ ರಸ್ತೆಯಲ್ಲಿ ಬೀದಿ ವ್ಯಾಪರಿಗಳಿಗೆ ಮಾಸ್ಕ್ ಮತ್ತು ಅಂತರಕಾಯ್ದುಕೊಳ್ಳಲು ಬಾಕ್ಸ್ ಮಾರ್ಕ್ಸ್ ಮಾಡಬೇಕೆಂದು ಸಭೆಯಲ್ಲಿ ಕೆಳಿರುತ್ತಾರೆ. ಅದಕ್ಕೆ ಹಿರಿಯ ಆರೋಗ್ಯ ಅಧಿಕಾರಿಗಳು ಮತ್ತು ಸಂಚಾರಿ ಪೊಲೀಸ್ ಅಧಿಕಾರಿಗಳು ಬಾಕ್ಸ್ ಮಾರ್ಕ್ಸ್ ಅಳವಡಿಸಲು ಮೇಲಿನಾಧಿಕಾರಿಗಳಿಂದ ಅನುಮತಿ ಪಡೆದು ಅಳವಡಿಸುವುದಾಗಿ ತಿಳಿಸಿರುತ್ತಾರೆ.
- ವಾರ್ಡ್ ಕಮಿಟಿ ಸಭೆಯಲ್ಲಿ ಮರದ ಕೊಂಬೆಗಳನ್ನು ಕತ್ತರಿಸಿ ಅಲ್ಲೆ ಬಿಡುವುದರಿಂದ ಸಾರ್ವಜನಿಕರು ಕಸವನ್ನು ತಂದು ಅದರ ಮೇಲೆ ಸುರಿಯುವುದರಿಂದ ಸೊಳ್ಳೆ ಸಮಸ್ಯೆಗಳು ಉದ್ಭವವಾಗುತ್ತದೆಂದು ಕಿರಿಯ/ಹಿರಿಯ ಆರೋಗ್ಯ ಪರಿವೀಕ್ಷರಿಗೆ ತಿಳಿಸಿರುತ್ತಾರೆ. ಅದಕ್ಕೆ ಆ ಸ್ಥಳವನ್ನು ಸ್ವಚ್ಚಗೊಳ್ಳಿ ಸೊಳ್ಳೆ ಔಷಧಿಗಳನ್ನು ಸಿಂಪಡಿಸುವುದಾಗಿ ಸಭೆಗೆ ತಿಳಿಸಿರುತ್ತಾರೆ.
- ಸಂಚಾರಿ ಪೊಲೀಸ್ ಅಧಿಕಾರಿಗಳು ಮಾಸ್ಕ್ ಮತ್ತು ಅಂತರ ಕಾಯ್ದುಕೊಳ್ಳುವುದು, ಡೆಬ್ರಿಸ್ ತೆಗೆಯುವುದು, ಹಾಗೂ ಬೀದಿಬದಿಯಲ್ಲಿ ಬಹಳ ದಿನಗಳಿಂದ ನಿಲ್ಲಿಸಿರುವ ವಾಹನಗಳಿಗೆ ದಂಡ ವಿಧಿಸಬೇಕೆಂದು ಸಭೆಯಲ್ಲಿ ಕೇಳಿರುತ್ತಾರೆ. ಸಂಚಾರಿ ಪೊಲೀಸ್ ಅಧಿಕಾರಿಗಳು ಕ್ರಮವಹಿಸುವುದಾಗಿ ತಿಳಿಸಿರುತ್ತಾರೆ.

Scanned with CamScanner

- ಬೀದಿ ನಾಯಿಗಳು ಪ್ರತಿ ಬೀದಿಗಳಲ್ಲಿ ಹೆಚ್ಚಾಗಿದ್ದು, ಮುಖ್ಯವಾಗಿ 10ನೇ, 11ನೇ ಮುಖ್ಯರಸ್ತೆಗಳು ಹಾಗೂ 13ನೇ ಅಡ್ಡರಸ್ತೆಗಳಲ್ಲಿ ಹೆಚ್ಚಾಗಿದ್ದು, ಕ್ರಮತೆಗೆದುಕೊಳ್ಳಬೇಕೆಂದು ಸಭೆಯಲ್ಲಿ ಕೇಳಿರುತ್ತಾರೆ. ಅದಕ್ಕೆ ಸಹಾಯಕ ಅಭಿಯಂತರರು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುವುದಾಗಿ ಸಭೆಗೆ ತಿಳಿಸಿದರು.
- 11ನೇ ಮುಖ್ಯರಸ್ತೆಯಲ್ಲಿರುವ ಮರಗಳನ್ನು ಅರಣ್ಯ ಇಲಾಖೆಯವರಿಗೆ ಮರದ ರೆಂಬೆ ಕೊಂಬೆಗಳನ್ನು ಕತ್ತರಿಸಲು ಸಭೆಯಲ್ಲಿ ಕೇಳಿರುತ್ತಾರೆ. ಅದಕ್ಕೆ ಸಹಾಯಕ ಅಭಿಯಂತರರು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುವುದಾಗಿ ಸಭೆಗೆ ತಿಳಿಸಿದರು.
- ಗೇಲ್ ಗ್ಯಾಸ್ ಕಂಪನಿಯವರಿಂದ ಮನೆಗಳಿಗೆ ಗ್ಯಾಸ್ ಅಳವಡಿಸುವ ಬಗ್ಗೆ ಎಲ್ಲಿ ಕನೆಕ್ಷನ್ ನೊಂದಾಯಿಸಬೇಕೆಂದು ಕೇಳಿರುತ್ತಾರೆ. ಅದಕ್ಕೆ ಸಹಾಯಕ ಅಭಿಯಂತರರು ಸಂಬಂಧಪಟ್ಟ ಗೇಲ್ ಗ್ಯಾಸ್ ಕಂಪನಿಯವರಿಂದ ಮಾಹಿತಿ ಪಡೆದು ನಂತರ ತಿಳಿಸುವುದಾಗಿ ಸಭೆಗೆ ತಿಳಿಸಿದರು.
- ವಾರ್ಡ್–65ರ ಸಭೆಗೆ ಸಹಾಯಕ ಅಭಿಯಂತರರು ಬೇರೆ ಇಲಾಖೆಯವರು ಕಾಮಗಾರಿಗಳನ್ನು ಮುಂದಿನ ತಿಂಗಳೊಳಗಾಗಿ ಪೂರ್ಣಗೊಳಿಸುವುದಾಗಿ ಹಾಗೂ ಬಿಬಿಎಂಪಿ ಇಲಾಖೆಯಿಂದ ರಸ್ತೆಗಳಿಗೆ ಡಾಂಬರ್ ಹಾಕುವುದು, ಪಾದಚಾರಿ ಮಾರ್ಗಗಳನ್ನು ಅಭಿವೃದ್ಧಿ ಪಡಿಸುವುದಾಗಿ ತಿಳಿಸಿರುತ್ತಾರೆ. ಹಾಗೂ ಎಲ್ಲಾ ಇಲಾಖಾ ಕಾಮಗಾರಿಗಳನ್ನು ಆದಷ್ಟು ಬೇಕೆ ಪೂರ್ಣಗೊಳಿಸುವುದಾಗಿ ತಿಳಿಸಿರುತ್ತಾರೆ.
- ಬಿ.ಡ್ಬ್ಲ್ಯೂ.ಎಸ್.ಎಸ್.ಬಿ, ಗ್ಯಾಸ್, ಮೇಜರ್ ರೋಡ್ಸ್, ಟೆಂಡರ್ ಸ್ಯೂರ್, ಪಶುಸಂಗೋಪನಾ ಇಲಾಖೆ ಮತ್ತು ಬಿಬಿಎಂಪಿ ಅರಣ್ಯ ಇಲಾಖೆಯವರಿಗೆ ಮುಂದಿನ ಸಭೆಗೆ ಖಡ್ಡಾಯವಾಗಿ ಹಾಜರಾಗಬೇಕೆಂದು ಸಭೆಯಲ್ಲಿ ಕೋರಿರುತ್ತಾರೆ.

ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯದರ್ಶಿಯವರು ವಂದಾನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

**ಕಾರ್ಯದರ್ಶಿ,**

ಸಹಾಯಕ ಅಭಿಯಂತರರು, ವಾರ್ಡ್–65
ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ

Scanned with CamScanner